ಮಾರ್ಪಾಡು ಮಾಡುವುದಕ್ಕೆ ಇಚ್ಛೆ ಇದ್ದರೆ, ಎರಡು ಸದನದ ಅಧ್ಯಕ್ಷರು ಕೂತು ಒಂದು ತೀರ್ಮಾನಕ್ಕೆ ಬರಬಹುದು. ಹೊಸ ಸಂಪ್ರದಾಯವನ್ನು ಮಾಡಬೇಕಾದರೆ, ಹೊಸ ರೂಪ ರೇಖೆಯನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಒಂದು ಅಂತಿಮ ನಿರ್ಣಯವಾಗಬೇಕು. ಆರ್ಥಸಚಿವರ ಉತ್ತರ ಆದ ಮೇಲೆ ಈ ಒಂದು ಕಾರ್ಯರೂಪವನ್ನು ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟರೆ, ನಾವು ಒಪ್ಪುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು.—ಇವತ್ತು ಸಾಯಂಕಾಲ ತೆಗೆದು ಕೊಳ್ಳೋಣ.

Re : Satyagraha by College Lecturers

ಶ್ರೀ ಕೊಣಂದೂರು ಲಿಂಗಪ್ಪ.—ನಾನು ನಿನ್ನೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ರಾಜ್ಯದ ಕಾಲೇಜು ಅಧ್ಯಾಪಕರು ತಮ್ಮ ಬೇಡಿಕೆಗಳನ್ನು ಇಟ್ಟು ಸತ್ಯಾಗ್ರಹ ಆರಂಭ ಮಾಡಿದ್ದಾರೆ. ನಾಳೆ ಮಂತ್ರಿಗಳಿಂದ ಹೇಳಿಕೆ ಕೊಡಿಸಿದರೆ ಒಳ್ಳೆಯದು.

ಅಧ್ಯಕ್ಷರು.—ಮಂತ್ರಿಗಳು ಇಲ್ಲ, ಮಂತ್ರಿಗಳು ಬರಲಿ ನೋಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಎರಡು ದಿವಸದ ಹಿಂದೆ ನೋಟೀಸ್ ಕಳುಹಿಸಿದ್ದೆ, ಅರ್ಧ ಭಾಗಕ್ಕೆ ಅರ್ಥ ಸಚಿವರು ಉತ್ತರ ಕೊಟ್ಟರು, ಇನ್ನೊಂದು ಅರ್ಧ ಭಾಗಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದರು. ಆದರೆ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ಇದರ ಬಗ್ಗೆ ನಾಳೆ ಉತ್ತರ ಕೊಡಿಸುತ್ತೀರಾ ?

ಅಧ್ಯಕ್ಷರು.—ನೋಡೋಣ, ಮುಖ್ಯಮಂತ್ರಿಗಳು ಬರಲಿ.

Budget Estimates for 1973–74—General Discussion

(Debate Continued)

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಣೀಯವರೇ, ನಮ್ಮ ರಾಜ್ಯದಲ್ಲಿ ಬರಗಾಲದ ದೃಷ್ಟಿಯಿಂದ ಕಷ್ಟ ಪರಿಸ್ಥಿತಿ ಇದ್ದಾಗ ಈ ವರ್ಷದ ಬಡ್ಜೆಟ್ಟನ್ನು ಮಂಡಿಸುವ ಜವಾಬ್ದಾರಿ ನನ್ನ ಹಾಲಿಗೆ ಬಂತು. ಬಡ್ಜೆಟ್ ಮಂಡಿಸುವಾಗ ನಾನು ಬಹಳ ಸ್ಪಷ್ಟವಾದ ಮಾತನ್ನು ಹೇಳಿದೆ. ಬರಗಾಲ ಪರಿಸ್ಥಿತಿ ಎಷ್ಟೇ ಕಷ್ಟಕರವಾಗಿದ್ದಾಗ್ಯೂ, ಈ ಸರ್ಕಾರ ಕೆಲಸ ಕೊಡುವ ದೃಷ್ಟಿಯಿಂದ, ಕುಡಿಯುವ ನೀರಿನ ಸೌಕರ್ಯದ ದೃಷ್ಟಿಯಿಂದ, ಕಾಳು ಮತ್ತು ಮೇವಿನ ದೃಷ್ಟಿಯಿಂದ ಸರ್ವ ಪ್ರಯತ್ನವನ್ನು ಮಾಡುತ್ತಿದ್ದಾರೆ, ಇದು ಬರೀ ಭಾಷಣವಲ್ಲ, ಆ ಪ್ರಯತ್ನವನ್ನು ನಿರ್ದಿಷ್ಟವಾದ ಕಾರ್ಯಕ್ರಮದ ರೂಪದಲ್ಲಿ ಈ ಸಭೆಯ ಮುಂದೆ ಇಟ್ಟಿದ್ದೇನೆ. ಬರಗಾಲದ ಕಾರ್ಯಕ್ರಮದ ಒಂದು ವೈಶಿಷ್ಟ್ಯ ಏನೆಂದರೆ, ಇದು ಬರೀ ತಾತ್ಕಾಲಿಕವಾಗಿ ಆ ಜನಕ್ಕೆ ಅನುಕೂಲ ಮಾಡಿಕೊಡುವುದು ಅಷ್ಟೇ ಅಲ್ಲ, ಶಾಶ್ವತವಾದ ರೀತಿಯಿಂದ ಆ ಪ್ರದೇಶದ ಆರ್ಥಿಕ ಶಕ್ತಿಯನ್ನು ಬೆಳೆಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ವಿಶೇಷವಾಗಿ ಸಾಯಿಲ್ ಕನ್ಸರ್ವೇಷನ್, ಸಣ್ಣ ನೀರಾವರಿ ಯೋಜನೆಗಳು ಯಾವ ಕಾಲಕ್ಕೂ ಇಪ್ಪೊಂದು ದೊಡ್ಡ ಪ್ರಮಾಣದಲ್ಲಿ ಅಲ್ಲಿ ನಡೆದಿರಲ್ಲಿಲ್ಲ. ಅಂಥ ಪ್ರಮಾಣದಲ್ಲಿ ಕೆಲಸಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಒಂದೇ ವಾಕ್ಯದಲ್ಲಿ ನಾನು ಹೇಳಿದೆ ಇದು ಡ್ರಾಟ್ ಕಂ ಡೆವೆಲಪ್‌ಮೆಂಟ್ ಬಡ್ಜೆಟ್ ಎಂದು. ಈ ಡ್ರಾಟ್ ಸಮಸ್ಯೆಯನ್ನು ಎದುರಿಸುವಾಗ, ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಹಿಂದುಳಿದಿರತಕ್ಕಂಥ ಜಿಲ್ಲೆಗಳ ಬೆಳವಣಿಗೆಯನ್ನು ಸಂಪೂರ್ಣವಾಗಿ ದೃಷ್ಟಿಯಲ್ಲಿಟ್ಟುಕೊಂಡು ಬೃಹತ್ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ನನಗೆ ತಿಳಿದಮಟ್ಟಿಗೆ, ಈ ಕಾರ್ಯಕ್ರಮಕ್ಕೆ ಸಾಕಷ್ಟು ಸ್ವಾಗತ ಸಾಮಾನ್ಯ ಜನ ಸಂಬಂಧಪಟ್ಟ ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ನೀಡಿ ದೆಎಂದರೆ ಅದು ಅತಿಶಯೋಕ್ತಿಯಾಗಲಾರದು.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳುವುದಕ್ಕೆ ಹೋದಿರಲ್ಲ.